

## ಸುಳ್ಳಿನ ಸರದಾರರು!

ಮಗ ರಾತ್ರಿ 12 ಗಂಟೆಗೆ ಬಂದಾಗ ಬಾಗಿಲ ಬಳಿಯೇ ವೃತ್ತ ಪತ್ರಿಕೆ ಓದುತ್ತಾ ಕಾಯ್ದು ಕುಳಿತಿದ್ದ ತಂದೆ ಆತ ಕಾಲಿಂಗ್ ಬೆಲ್ ಒತ್ತಿದ ತಕ್ಷಣ ಬಾಗಿಲು ತೆರೆದು 'ಯಾಕೋ ಲೇಟು? ಇಷ್ಟು ಹೊತ್ತು ಎಲ್ಲಿದ್ದೆಯೋ ಕತ್ತೆ ಬಡವ' ಎಂದು ಜಬರಿಸಿ ಕೇಳಿದರು.

ಮಗ: ಫ್ರೆಂಡ್ ಮನೇಲಿ ಕಂಬೈನ್ಡ್ ಸ್ಟಡೀ ಮಾಡ್ತಿದ್ದೇ ಅಪ್ಪಾ.

ತಂದೆ, ಆತನ ಮಾತನ್ನು ನಂಬದೆ, ಆತನ ಸ್ನೇಹಿತರಿಗೆಲ್ಲಾ ಒಬ್ಬರಾದ ಮೇಲೆ ಒಬ್ಬರಂತೆ ಫೋನ್ ಮಾಡಿ ಕೇಳಿದರು. ಆಗ ನಾಲ್ಕು ಮಂದಿ 'ಹೌದು ಅಂಕಲ್. ಅವನು ಇಲ್ಲೇ ಇದ್ದ' ಎಂಬರ್ಥದಲ್ಲಿ ಉತ್ತರಿಸಿದರು.

ಇಬ್ಬರು, 'ಈಗಷ್ಟೇ ನಿಮ್ಮ ಮನೆಗೆ ಹೋದ' ಎಂದು ಹೇಳಿದರು. ಇನ್ನಿಬ್ಬರು 'ಅಂಕಲ್ ಅವನು ಇಲ್ಲೇ ಇದ್ದಾನೆ. ಫೋನ್ ಕೊಡ್ಲಾ? ಅವನಿಗೆ ಡಿಸ್ಟರ್ಬ್ ಆಗ್ತದೋ ಏನೋ ಕೊಡು ಅಂದ್ರೆ ಕೊಡ್ತೀನಿ' ಅಂದ್ರು!

★★★

## ಕಳ್ಳರನ್ನು ಹಿಡಿಯುವ ಯಂತ್ರ

ವಿಜ್ಞಾನಿಗಳು ಕಳ್ಳರನ್ನು ಹಿಡಿಯುವ ಯಂತ್ರವನ್ನು ಸಂಶೋಧಿಸಿದರು. ಈ ಯಂತ್ರದಿಂದ ಅಮೆರಿಕಾದಲ್ಲಿ ಒಂದೇ ದಿನದಲ್ಲಿ 40 ಮಂದಿ ಕಳ್ಳರನ್ನು, ರಷ್ಯಾದಲ್ಲಿ 20 ಮಂದಿ ಕಳ್ಳರನ್ನು ಹಿಡಿಯಲಾಯಿತು. ಈ ಯಂತ್ರ ಭಾರತಕ್ಕೆ ಆಮದಾಗಿ ಬಂದಾಗ ಅರ್ಧ ಗಂಟೆಯೊಳಗೇ ಈ ಯಂತ್ರವೇ ಕಳುವಾಗಿ ಹೋಗಿ ಗುಜರಿ ಸೇರಿಕೊಂಡಿತು!

(ಸಂಗ್ರಹ) **ಕೆ.ಜಯಮ್ಮ ಮಂಡ್ಯ**

ಹೆಂಡತಿ: ನನ್ಗೆ ಆ ಭಿಕ್ಷುಕನನ್ನು ಕಂಡ್ರೆ ಆಗಲ್ಲ.

ಗಂಡ: ಯಾಕೆ?

ಹೆಂಡತಿ: ನಿನ್ನೆ ಅವ್ನಿಗೆ ಊಟ ಹಾಕಿದ್ದೆ... ಇವತ್ತು ಬೆಳಿಗ್ಗೆ ಅವ್ನು ನನ್ಗೆ 'ಅಡುಗೆ ಮಾಡುವ ವಿಧಾನ' ಅನ್ನೋ ಪುಸ್ತಕ ಕೊಟ್ಟು ಹೋಗಿದ್ದಾನೆ.

★★★

ಹೆಂಡತಿ: ಇವತ್ತೂ... ಕುಡ್ಕೊಂಡು ಬಂದ್ರಾ...?

ಗಂಡ: ಇಲ್ವಲ್ಲಾ.. ನೋಡು ನಾನು ಲ್ಯಾಪ್‌ಟಾಪ್‌ನಲ್ಲಿ ವರ್ಕ್ ಮಾಡ್ತಿದ್ದೀನಿ...

ಹೆಂಡತಿ: ಅದು ಲ್ಯಾಪ್‌ಟಾಪ್ ಅಲ್ಲಾರಿ... ನಿಮ್ಮ ಸೂಟ್‌ಕೇಸ್!

(ಸಂಗ್ರಹ) **ಸಂಜಯ್ ಎಸ್.ಎಂ.**

---

ಮದುಮಗಳನ್ನು ಗಂಡನ ಮನೆಗೆ ಕಳಿಸುವಾಗ ತಾಯಿ ದುಃಖ ಸಹಿಸಲಾಗದೇ ಜೋರಾಗಿ ಅಳುತ್ತಿದ್ದಳು. ಆಗ ಅಳಿಯ ಅತ್ತೆಗೆ ಹೇಳಿದ. 'ಅತ್ತೆಯವರೇ ಕೇವಲ 20 ವರ್ಷ ನಿಮ್ಮ ಮಗಳನ್ನು ಸಾಕಿದ್ದಕ್ಕೆ ನೀವು ಇಷ್ಟೊಂದು ಅಳುತ್ತಿದ್ದೀರಲ್ಲ. ನಾನು ಇವಳನ್ನು ಜೀವನ ಪೂರ್ತಿ ಸಾಕಬೇಕಲ್ಲ. ನಾನು ಎಷ್ಟು ಅಳಬೇಕು ನೀವೇ ಹೇಳಿ..?'

ಅತ್ತೆ ಗಪ್ ಚುಪ್

(ಸಂಗ್ರಹ) **ಭಾರತಿ ಮಾನಗೆ**

